## ನಿಸ್ಪೋಡನೆ

# ವಿವಿಗಳಿಗೆ ಬೇಕಿದೆ ನೈತಿಕ ಸ್ಪರ್ಶ

ವಿಶ್ವದ ಅತ್ಯುತ್ತಮ ವಿಶ್ವವಿದ್ಯಾಲಯಗಳಿಗೆ ಸಾಟಿಯಾದ ಸಂಸ್ಥೆಗಳನ್ನು ನಮ್ಮಲ್ಲಿ ರೂಪಿಸುವುದು ಸಾಧ್ಯವೇ ಇಲ್ಲವೇನೋ ಎನ್ನುವಷ್ಟರ ಮಟ್ಟಿಗೆ ದೇಶದಲ್ಲಿನ ಉನ್ನತ ಶಿಕ್ಷಣ ಭ್ರಷ್ಟಗೊಂಡಿದೆ. ಯಾವುದೇ ವಿಶ್ವವಿದ್ಯಾಲಯವೊಂದರ ಜೀವಾಳ ಅಲ್ಲಿ ನಡೆಯುವ ಅಧ್ಯಯನ ಹಾಗೂ ಸಂಶೋಧನೆಗಳು. ನಮ್ಮಲ್ಲೀ ಹೊಸ ಸಂಶೋಧನೆಗಳಿಗೆ ವಿಶ್ವವಿದ್ಯಾಲಯಗಳು ಬೆನ್ನುಹಾಕಿ ಯಾವುದೋ ಕಾಲವಾಗಿದೆ.

ವಿಶ್ವವಿದ್ಯಾಲಯಗಳನ್ನು ಅರಿವಿನ ಬೆಳಕು ಹಾಗೂ ಸ್ವಾತಂತ್ರ್ಯದ ರೂಪದಲ್ಲಿ ಪರಿಭಾವಿಸಲಾಗುತ್ತದೆ. ಆದರೆ, ಭಾರತದಲ್ಲಿನ ವಿಶ್ವವಿದ್ಯಾಲಯಗಳ ಈ ಹೊತ್ತಿನ ಪರಿಸ್ಥಿತಿಯನ್ನು ನೋಡಿದರೆ ಅಲ್ಲಿ ಅರಿವಿನ ಹರಿವಿಗೂ ಬೆಳಕಿನ ಹಂಬಲಕ್ಕೂ ಕೊರತೆ ಉಂಟಾಗಿರುವಂತಿದೆ. ಜ್ಞಾನದ ಸಾಧ್ಯತೆಗಳನ್ನು ಅಭಿವ್ಯಕ್ತಿಸಬೇಕಾದ ನಮ್ಮ ಬಹುತೇಕ ವಿಶ್ವವಿದ್ಯಾಲಯಗಳು ತಂತಮ್ಮ ದೌರ್ಬಲ್ಯಗಳನ್ನು ಬಯಲು ಮಾಡಿಕೊಳ್ಳುತ್ತ ಬೀದಿಯಲ್ಲಿ ನಿಂತಿವೆ. ಪ್ರಜ್ಞಾವಂತ ತರುಣ ತರುಣಿಯರನ್ನು ರೂಪಿಸಬೇಕಾದ ಇವು ರಾಜಕಾರಣದ ಅಖಾಡಗಳಾಗಿ ಬದಲಾಗಿವೆ. ನಾಯಿಕೊಡೆಗಳಂತೆ ಹಬ್ಬಿರುವ ನಕಲಿ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳ ಭವಿಷ್ಯದೊಡನೆ ಹುಡುಗಾಟ ಆಡುತ್ತಿವೆ.

ಭಾರತದಲ್ಲಿನ ವಿಶ್ವವಿದ್ಯಾಲಯಗಳ ಕಳಪೆ ಸಾಧನೆ ಹೊಸತೂ ಅಲ್ಲ, ಅದು ಗುಟ್ಟಿನ ಸಂಗತಿಯೂ ಅಲ್ಲ. ಯುಪಿಎ ಸರ್ಕಾರದಲ್ಲಿ ಪ್ರಧಾನಮಂತ್ರಿಯಾಗಿದ್ದ ಮನಮೋಹನ್ ಸಿಂಗ್ ಅವರು ಉನ್ನತ ಶಿಕ್ಷಣದಲ್ಲಿ ಗುಣಮಟ್ಟ ಕ್ಷೀಣಿಸುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ವಿಶ್ವದ ಅತ್ಯುತ್ತಮ 200 ವಿವಿಗಳಲ್ಲಿ ಭಾರತದ ಒಂದು ವಿಶ್ವವಿದ್ಯಾಲಯವೂ ಇಲ್ಲದ ಬಗ್ಗೆ ಅವರು ವಿಷಾದ ವ್ಯಕ್ತಪಡಿಸಿದ್ದರು. ದೇಶದಲ್ಲಿ ಒಟ್ಟು 700 ವಿವಿಗಳು ಕಾರ್ಯ ನಿರ್ವಹಿಸುತ್ತಿದ್ದರೂ ಅವುಗಳಲ್ಲೊಂದೂ ವಿಶ್ವಮಟ್ಟದಲ್ಲಿ ಗುರ್ತಿಸಿಕೊಂಡಿಲ್ಲ. 'ರಾಷ್ಟ್ರೀಯ ಜ್ಞಾನ ಆಯೋಗ'ದ ವರದಿಯೂ ವಿಶ್ವವಿದ್ಯಾಲಯಗಳ ಕಾರ್ಯ ನಿರ್ವಹಣೆ ಬಗ್ಗೆ ಅಸಮಾಧಾನ ಸೂಚಿಸಿದೆ. ರಾಷ್ಟ್ರಪತಿ ಪ್ರಣವ್ ಮುಖರ್ಜಿ ಕೂಡ ಉನ್ನತ ಶಿಕ್ಷಣದ ಅಪಮೌಲ್ಯೀಕರಣದ ಬಗ್ಗೆ ಆತಂಕ ಸೂಚಿಸಿದ್ದಾರೆ. ಆದರೆ, ಪರಿಸ್ಥಿತಿಯಲ್ಲಿ ಸುಧಾರಣೆಯೇನೂ ಕಾಣಿಸುತ್ತಿಲ್ಲ. ವಿಶ್ವದ ಅತ್ಯುತ್ತಮ ವಿಶ್ವವಿದ್ಯಾಲಯಗಳಿಗೆ ಸಾಟಿಯಾದ ಸಂಸ್ಥೆಗಳನ್ನು ನಮ್ಮಲ್ಲಿ ರೂಪಿಸುವುದು ಸಾಧ್ಯವೇ ಇಲ್ಲವೇನೋ ಎನ್ನುವಷ್ಟರ ಮಟ್ಟಿಗೆ ದೇಶದಲ್ಲಿನ ಉನ್ನತ ಶಿಕ್ಷಣ ಭ್ರಷ್ಟಗೊಂಡಿದೆ. ಯಾವುದೇ ವಿಶ್ವವಿದ್ಯಾಲಯವೊಂದರ ಜೀವಾಳ ಅಲ್ಲಿ ನಡೆಯುವ ಅಧ್ಯಯನ ಹಾಗೂ ಸಂಶೋಧನೆಗಳು. ನಮ್ಮಲ್ಲೀ ಹೊಸ ಸಂಶೋಧನೆಗಳಿಗೆ ವಿಶ್ವವಿದ್ಯಾಲಯಗಳು ಬೆನ್ನುಹಾಕಿ ಯಾವುದೋ ಕಾಲವಾಗಿದೆ. ಇದಕ್ಕೆ ತಕ್ಕನಾಗಿ ಸಂಶೋಧನೆ ಕುರಿತ ಮಾನದಂಡಗಳನ್ನು ಕೂಡ ಸವಕಲಾಗಿಸಿದ್ದೇವೆ.

ಇರುವ ವಿಶ್ವವಿದ್ಯಾಲಯಗಳು ಬೌದ್ಧಿಕ ದಾರಿದ್ರ್ಯದಿಂದ ಬಳಲುತ್ತಿರುವ ಸ್ಥಿತಿ ಒಂದೆಡೆ ಇದ್ದರೆ, ಇನ್ನೊಂದೆಡೆ ನಕಲಿ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳನ್ನು ವಂಚಿಸುತ್ತಿವೆ. 'ವಿಶ್ವವಿದ್ಯಾಲಯ ಅನುದಾನ ಆಯೋಗ'ದ (ಯುಜಿಸಿ) ಇತ್ತೀಚಿನ ಪ್ರಕಟಣೆಯಂತೆ ದೇಶದಲ್ಲಿ ಒಟ್ಟು 21ನಕಲಿ ವಿಶ್ವವಿದ್ಯಾಲಯಗಳಿವೆ. ಕೇಂದ್ರ, ರಾಜ್ಯಗಳಿಂದ ಮಾನ್ಯತೆ ಪಡೆಯದ ಈ ವಿವಿಗಳು ಸಾವಿರಾರು ವಿದ್ಯಾರ್ಥಿಗಳಿಗೆ ಪದವಿ ನೀಡಿದ್ದು, ಆ ಪದವಿಗಳಿಗೆ ಯಾವುದೇ ಮಾನ್ಯತೆ ಇಲ್ಲ ಎಂದು ಯುಜಿಸಿ ಹೇಳಿದೆ.

ಕರ್ನಾಟಕದಲ್ಲಿ ಕೂಡ ಉನ್ನತ ಶಿಕ್ಷಣದ ಪರಿಸ್ಥಿತಿ ಭಿನ್ನವಾಗಿಯೇನೂ ಇಲ್ಲ. 'ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ' ತನ್ನ ಮಾನ್ಯತೆಯನ್ನು ನವೀಕರಿಸಿಕೊಳ್ಳದ ಕಾರಣಕ್ಕಾಗಿ 'ಯುಜಿಸಿ'ಯ ಕಪ್ಪು ಪಟ್ಟಿಗೆ ಸೇರಿದೆ. ಮಾನ್ಯತೆಯನ್ನು ನವೀಕರಿಸುವಂಥ ಪ್ರಾಥಮಿಕ ಶಿಸ್ತನ್ನು ಸಮರ್ಪಕವಾಗಿ ಪಾಲಿಸದ ವಿವಿಯಿಂದ ಬೇರೆ ಏನನ್ನು ನಿರೀಕ್ಷಿಸುವುದು? ರಾಜ್ಯದ ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳು ಕೃತಿಚೌರ್ಯದ ಪ್ರಕರಣಗಳಲ್ಲಿ ಸಿಲುಕಿಕೊಂಡಿದ್ದಾರೆ. ಪಿಎಚ್.ಡಿ. ಪ್ರೌಢಪ್ರಬಂಧಗಳು ಕೂಡ ಕೃತಿಚೌರ್ಯದ ಆರೋಪ ಎದುರಿಸುತ್ತಿವೆ. ಅಧ್ಯಯನ ಹಾಗೂ ಸಂಶೋಧನೆಗಳು ಎಲ್ಲಿಯಾದರೂ ನಡೆಯುತ್ತಿವೆಯೇ ಎನ್ನುವುದರ ಬಗ್ಗೆಯೇ ಅಧ್ಯಯನ ನಡೆಸುವ ಪರಿಸ್ಥಿತಿ ಇದೆ. ಹೊಸ ವಿಚಾರಗಳ ಬಗೆಗಿನ ಆಸಕ್ತಿ ಹಿನ್ನೆಲೆಗೆ ಸರಿದು, ಅನುದಾನವನ್ನು ಖರ್ಚು ಮಾಡುವ ಉತ್ಸಾಹವೇ ಎಲ್ಲೆಡೆ ಕಾಣಿಸುತ್ತಿದೆ. ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಕುಲಪತಿಗಳ ಆಯ್ಕೆಗೆ ಸಂಬಂಧಿಸಿದಂತೆ ನಡೆದ ಪ್ರಹಸನಗಳು, ಭ್ರಷ್ಟಾಚಾರದ ಆರೋಪಗಳು ವಿಶ್ವವಿದ್ಯಾಲಯದ ಪರಿಕಲ್ಪನೆಗೆ ಹಾಗೂ ಘನತೆಗೆ ಮಸಿ ಬಳಿಯುವಂತಿವೆ.

ನಳಂದಾ, ತಕ್ಷಶಿಲಾಗಳಂಥ ಉನ್ನತ ಶಿಕ್ಷಣ ಮಾದರಿಗಳ ಇತಿಹಾಸ ಭಾರತದ್ದು. ಈ ಮಾದರಿಗಳ ಪುನರುಜ್ಜೀವನದ ಬಗ್ಗೆ ಆಗಾಗ ಚರ್ಚೆಗಳು ನಡೆಯುತ್ತವೆ. ಆದರೆ, ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ವಿಶ್ವವಿದ್ಯಾಲಯಗಳಿಗೆ ನೈತಿಕಶಕ್ತಿ ತುಂಬುವ ಬಗ್ಗೆ ಪರಿಣಾಮಕಾರಿ ಪ್ರಯತ್ನಗಳು ನಡೆದಂತಿಲ್ಲ. ಸಮಾಜದ ಹಿತಕ್ಕಾಗಿ ಉನ್ನತ ಶಿಕ್ಷಣವನ್ನು ಬಳಸುವ ನಿಟ್ಟಿನಲ್ಲಿ ಕ್ರಿಯಾಶೀಲವಾಗುವುದು ಹಾಗೂ ಸಂಶೋಧನೆಯ ಸಾಧ್ಯತೆಗಳನ್ನು ವಿಸ್ತರಿಸುವುದು ಜರೂರಾಗಿ ಆಗಬೇಕಾಗಿರುವ ಕೆಲಸ. ಉನ್ನತ ಶಿಕ್ಷಣದಲ್ಲಿ ಖಾಸಗೀಕರಣಕ್ಕೆ ಒತ್ತು ನೀಡುವ ಸರ್ಕಾರ, ಗುಣಮಟ್ಟದ ವಿಷಯದಲ್ಲಿ ನಿಯಂತ್ರಣ ಹೊಂದಬೇಕಾಗಿದೆ. ಪದವಿ ಪ್ರಮಾಣ ಪತ್ರಗಳನ್ನು ವಿತರಿಸುವ ಹಂಚಿಕೆ ಕೇಂದ್ರಗಳಾಗಿಯಷ್ಟೇ ವಿಶ್ವವಿದ್ಯಾಲಯಗಳು ಉಳಿಯದೆ, ವಿದ್ಯಾರ್ಥಿಗಳ ಮನೋವಿಕಾಸಕ್ಕೆ ಪೂರಕವಾಗುವ ಹಾಗೂ ಅವರಲ್ಲಿ ನೈತಿಕ ಶಕ್ತಿಯನ್ನು ವೃದ್ಧಿಸುವ ರೀತಿಯಲ್ಲಿ ಕ್ರಿಯಾಶೀಲವಾಗಬೇಕು. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಾಮಾಣಿಕ ಪ್ರಯತ್ನಗಳನ್ನು ನಡೆಸದೆ ಹೋದರೆ, ಬೌದ್ಧಿಕವಾಗಿ ಭ್ರಷ್ಟಗೊಂಡ ತರುಣ ತರುಣಿಯರನ್ನು ಟಂಕಿಸುವ ಕಾರ್ಖಾನೆಗಳಾಗಿ ನಮ್ಮ ವಿಶ್ವವಿದ್ಯಾಲಯಗಳು ಬದಲಾಗುವ ಸಾಧ್ಯತೆ ನಿಚ್ಚಳವಾಗಿದೆ.




■ ರಘುನಾಥ ಚ.ಹ.